**ವಿ. ರಶ್ಮಿ, ಭಾ. ಆ. ಸೇ.**
ಸರ್ಕಾರದ ಕಾರ್ಯದರ್ಶಿ
**V. RASHMI, I.A.S.**
**Secretary to Government**

ಕರ್ನಾಟಕ ಸರ್ಕಾರ ಸಚಿವಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
**Karnataka Government Secretariat**
**Rural Development & Panchayat Raj Department**

**ಅ.ಸ.ಪ.ಸಂಖ್ಯೆ: ಗ್ರಾಅಪ/215/ಗ್ರಾಪಂಅ/2013** **ದಿನಾಂಕ: 03-06-2013.**

ಮಾನ್ಯರೆ,

ವಿಷಯ: 2013-14ನೇ ಸಾಲಿನಲ್ಲಿ ಕಾಮಗಾರಿವಾರು ಸಮಗ್ರ ವಾರ್ಷಿಕ ಕ್ರಿಯಾ ಯೋಜನೆ ಮತ್ತು ಆಯ-ವ್ಯಯ ಅನುಮೋದನೆಗಾಗಿ ಗ್ರಾಮ ಸಭೆಗಳನ್ನು ಕಡ್ಡಾಯವಾಗಿ ನಡೆಸುವ ಬಗ್ಗೆ.

ಉಲ್ಲೇಖ: ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 8 ಗ್ರಾಪಂಅ 2012, ದಿನಾಂಕ:08-03-2012

ವಿಕೇಂದ್ರೀಕೃತ ಆಡಳಿತದ ಯಾವುದೇ ವ್ಯವಸ್ಥೆಯ ತಳಹದಿಯು ಜನರ ಭಾಗವಹಿಸುವಿಕೆಯೇ ಆಗಿದ್ದು, ಜನರಿಗೆ ಅಧಿಕಾರ ವಹಿಸಿಕೊಟ್ಟಾಗ ಮಾತ್ರ ಇದು ಅರ್ಥಪೂರ್ಣವಾಗುತ್ತದೆ. ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಗ್ರಾಮ ಸಭೆಯು ಜನರಿಗೆ ಅಧಿಕಾರ ವಹಿಸಿಕೊಡುವುದನ್ನು ಖಚಿತಪಡಿಸುವುದಕ್ಕೆ ಒಂದು ಅತ್ಯಾವಶ್ಯಕ ಸಾಂಸ್ಥಿಕ ವ್ಯವಸ್ಥೆಯಾಗಿರುತ್ತದೆ. ಹೀಗೆ, ವಿಕೇಂದ್ರಿಕರಣದ ಮಾದರಿಗಳು ಗ್ರಾಮ ಸಭೆಯೆಂಬ ಸ್ಪಂದನಶೀಲ ವ್ಯವಸ್ಥೆಯ ತಳಪಾಯವನ್ನು ಆಧರಿಸುತ್ತವೆ. **ಗ್ರಾಮಸಭೆಯು ಹಳ್ಳಿಯ ವಿಧಾನಸಭೆಯಾಗಿರುತ್ತದೆ.**

**ಕರ್ನಾಟಕ ಪಂಚಾಯತಿ ರಾಜ್ ಅಧಿನಿಯಮ, 1993 ರ ಪ್ರಕರಣ 3-ಎ** ರಲ್ಲಿ ನಿಯತ ಮತ್ತು ಮಧ್ಯಂತರ ಗ್ರಾಮ ಸಭೆಯನ್ನು ಸಮಾವೇಶಗೊಳಿಸುವುದನ್ನು ಗ್ರಾಮ ಪಂಚಾಯತಿಗಳಿಗೆ ಕಡ್ಡಾಯಗೊಳಿಸಲಾಗಿದೆ. ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993 ಕ್ಕೆ ಅನುಗುಣವಾಗಿ ಗ್ರಾಮಸಭೆಗಳು ಸುಗಮವಾಗಿ ಮತ್ತು ಪರಿಣಾಮಕಾರಿಯಾಗಿ ವಿಕೇಂದ್ರೀಕೃತ ಪ್ರಜಾಪ್ರಭುತ್ವದ ನೈಜ ಚೈತನ್ಯದೊಡನೆ ಕಾರ್ಯನಿರ್ವಹಿಸಲು ಸಾಧ್ಯವಾಗುವಂತೆ 2004ರಲ್ಲಿ ವಿಸ್ತೃತ ಮಾರ್ಗಸೂಚಿಯನ್ನು ಹೊರಡಿಸಲಾಗಿದೆ. ಇದಲ್ಲದೆ ಹಲವಾರು ಸುತ್ತೋಲೆಗಳ ಮೂಲಕ ಗ್ರಾಮ ಸಭೆಗಳನ್ನು ಗ್ರಾಮ ಪಂಚಾಯತಿಗಳು ನಡೆಸುವ ಬಗ್ಗೆ ನಿರ್ದೇಶನ ನೀಡಲಾಗಿದೆ.

ಆದುದರಿಂದ ಎಲ್ಲಾ ಯೋಜನೆಗಳ ಮತ್ತು ಸ್ವಂತ ಸಂಪನ್ಮೂಲ ಕ್ರೋಢೀಕೃತ 2013-14ರ ಕಾಮಗಾರಿವಾರು ಸಮಗ್ರ ವಾರ್ಷಿಕ ಕ್ರಿಯಾ ಯೋಜನೆ ಮತ್ತು ಆಯ-ವ್ಯಯ ಅನುಮೋದನೆಗಾಗಿ ಗ್ರಾಮ ಸಭೆಗಳನ್ನು ನಡೆಸಿ, ಕಡ್ಡಾಯವಾಗಿ ವಿಡಿಯೋ ಚಿತ್ರೀಕರಣ ಮಾಡುವುದು ಹಾಗೂ ನಡವಳಿಯನ್ನು ಸ್ಥಳದಲ್ಲಿಯೇ ತಯಾರಿಸುವುದು. ಸಭೆಯಲ್ಲಿ ಹಾಜರಿದ್ದ ಗ್ರಾಮ ಸಭೆಯ ಸದಸ್ಯರಿಂದ ಸಹಿ ಪಡೆಯುವುದು. ಸದರಿ ನಡವಳಿಯನ್ನು ಗ್ರಾಮ ಸಭೆ ಮುಗಿದ ಕೂಡಲೇ ಪಂಚತಂತ್ರ ತಂತ್ರಾಂಶದಲ್ಲಿ ಸಹ ಅಳವಡಿಸುವುದು.

ಈ ಎಲ್ಲಾ ಪ್ರಕ್ರಿಯೆಯನ್ನು ದಿನಾಂಕ:10-06-2013 ರೊಳಗೆ ಮುಗಿಸಿ ತೆಗೆದುಕೊಂಡ ಕ್ರಮದ ಬಗ್ಗೆ ಕೂಡಲೇ ಸರ್ಕಾರಕ್ಕೆ ವರದಿ ಸಲ್ಲಿಸುವಂತೆ ಕೋರಿದೆ.

**ವಂದನೆಗಳೊಂದಿಗೆ,**

ತಮ್ಮ ವಿಶ್ವಾಸಿ,
Rashmi V.

ಎಲ್ಲಾ ಜಿಲ್ಲಾ ಪಂಚಾಯತಿ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು

**3ನೇ ಮಹಡಿ, 3ನೇ ಹಂತ, ಬಹುಮಹಡಿಗಳ ಕಟ್ಟಡ, ಬೆಂಗಳೂರು-560 001.** 3rd Floor, 3rd Stage, M.S. Building, Bangalore-560 001.
Tel. : 2238 4574 2203 2941 Fax : 080-2238 9520 E-mail : secypr-rdpr@karnataka.gov.in / rashmi.venkataraju@gmail.com